

ಕಂಬದಂತೆ ಬೀಳುವ ಜಲಪಾತ.

ಕಾಣಿಸಿದವು. ಸ್ಥಳೀಯವಾಗಿ ‘ಗ್ಲೆನ್‌ಕಾರ್ ಲೇಕ್’ ಎಂದು ಕರೆಯುವ ಈ ಸರೋವರ ಸಿಹಿನೀರಿನ ಕೆರೆ. ಈ ಸರೋವರವು ಪೂರ್ವ–ಪಶ್ಚಿಮವಾಗಿ 2.5 ಕಿ.ಮೀ. ಉದ್ದವಾಗಿದ್ದು, 0.6 ಕಿ.ಮೀ. ಅಗಲವಿದೆ. ಇಲ್ಲಿನ ಪರಿಸರ ಉತ್ತಮವಾಗಿರುವುದರಿಂದ ಸರೋವರದ ನೀರು ಅತ್ಯುತ್ತಮ ಗುಣಮಟ್ಟದಿಂದ ಕೂಡಿದ್ದಾಗಿದೆ. ಆ ತಿಳಿನೀರಿನ ಸರೋವರ ಹಾಗೂ ಪರ್ವತ ಸಾಲುಗಳನ್ನು ನೋಡಿ ಕಣ್ತುಂಬಿಸಿಕೊಂಡೆವು. ಅಲ್ಲಿನ ಸರ್ಕಾರ ಸ್ವಚ್ಛತೆಗೆ ಎಷ್ಟು ಮಹತ್ವ ನೀಡಿದೆ ಎನಿಸಿತು.

ಗ್ಲೆನ್‌ಕಾರ್ ಸ್ಥಳವನ್ನು ಹಿಂದೊಮ್ಮೆ ಹಿಮಯುಗದ ಕಾಲದಲ್ಲಿ ಮಂಜುಗೆಡ್ಡೆ ಆವರಿಸಿಕೊಂಡಿತ್ತು. ಕ್ರಮೇಣ ಹವಾಮಾನದ ಬದಲಾವಣೆಯಿಂದ ಹಿಮನದಿಯ ಸವೆತದ ಪ್ರಕ್ರಿಯೆ ನಡೆದು, ಬಂಡೆಗಳು ಕುಸಿದ ಪರಿಣಾಮ ಕಡಿದಾದ ಇಳಿಜಾರು ಇಲ್ಲಿ ನಿರ್ಮಾಣವಾಯಿತಂತೆ.

ಬದಲಾದ ಹವಾಮಾನದ ಪ್ರದೇಶದಲ್ಲಿ ಹಲವು ಸಸ್ಯಪ್ರಭೇದಗಳು ಕಾಣಿಸಿಕೊಂಡವು. ಅವುಗಳಲ್ಲಿ ಆಲ್ಪೈನ್ ಸಸ್ಯ ಸಮೃದ್ಧಿಯಾಗಿ ಬೆಳೆಯಿತು. ಈ ಸಸ್ಯಗಳು ತಂಪಾದ, ಶುಷ್ಕ ಪರಿಸರದಲ್ಲಿ ಹಿಮನದಿಯ ಮೇಲಿನ ಪ್ರಸ್ಥಭೂಮಿಯ ಮೇಲೆ ಬೆಳೆಯುತ್ತವೆ. ಈ ಆಲ್ಪೈನ್ ಪ್ರಭೇದ ಸಸ್ಯಗಳು ಒಂದು ಸ್ಮಾರಕವಾಗಿ ಉಳಿದುಕೊಂಡಿವೆ. ಸರೋವರದ ಪಕ್ಕದಲ್ಲೇ ವಾಹನಗಳ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ. ಅಲ್ಲಿಗೆ ಬರುವ ಪ್ರವಾಸಿಗರಿಗೆ ಅನುಕೂಲವಾಗುವಂತೆ ಶೌಚಾಲಯ ಹಾಗೂ ಐಸ್‌ಕ್ರೀಂ ಪಾರ್ಲರ್ ಅಲ್ಲಿವೆ. ಅಲ್ಲಿ ಕಾರಿನಲ್ಲಿ ಕುಳಿತು ನಾವು ತಂದಿದ್ದ ಉಪಾಹಾರವನ್ನು ಸೇವಿಸಿ ಐಸ್‌ಕ್ರೀಂ ಸವಿದು ಉದ್ಯಾನವನ ಹಾಗೂ ಕಾಡಿನ ಪರಿಸರದಲ್ಲಿರುವ ಜಲಪಾತ ನೋಡಲು ತೆರಳಿದೆವು.

ಈಶಾನ್ಯ ಮೂಲೆಯಲ್ಲಿರುವ ಕಿರು ರಸ್ತೆಯಲ್ಲಿ ಜಲಪಾತ ಇರುವ ಕಡೆ ಸಾಗಿದೆವು. ಮೊದಲು ನಮಗೆ ಎದುರಾದದ್ದು ಸುಂದರವಾದ ಉದ್ಯಾನವನ. ಅಲ್ಲಿ ಸ್ವಲ್ಪಹೊತ್ತು ಕುಳಿತು ಪ್ರಕೃತಿಯ ಸೌಂದರ್ಯವನ್ನು ನೋಡಿ ಜಲಪಾತದ ಕಡೆಗೆ ಹೊರಟೆವು. ಸಣ್ಣ ಜಾಡು ಹಿಡಿದು ಹೋಗುವಾಗ ಸಣ್ಣ ಸೇತುವೆ ದಾಟಿ ಮುಂದೆ ಸಾಗಿದೆವು. ಝರಿಯ ಪಕ್ಕದಲ್ಲಿ ಸಾಗಿದಂತೆ ಜಲಪಾತದ ಸ್ಥಳ ಸಿಕ್ಕಿತು. ಅಲ್ಲಿ ಪರ್ವತದ ಮೇಲಿಂದ ಮರ–ಗಿಡಗಳ ನಡುವೆ ಹರಿದು ಬರುವ ನೀರು 15 ಮೀಟರ್ ಎತ್ತರದಿಂದ ಧುಮುಕುವ ಈ ಜಲಪಾತದ ನೀರು ಝರಿಯಾಗಿ ಮುಂದೆ ಹರಿದು ಸರೋವರವನ್ನು ಸೇರುತ್ತದೆ.

ಈ ಜಲಪಾತ ಕಂಬದ ರೀತಿಯಲ್ಲಿ ಬೀಳುವುದು ಇಲ್ಲಿಯ ವಿಶೇಷ. ಅಲ್ಲಿಂದ ಕಿರು ಮೆಟ್ಟಿಲುಗಳನ್ನು ಹತ್ತಿ ಹೋಗುವಾಗ ಅರಣ್ಯದಲ್ಲಿ ಹೋಗುವ ಅನುಭವ ಉಂಟಾಯಿತು. ಪ್ರವಾಸಿಗರಾಗಿ ಬರುವ ಮಕ್ಕಳಿಗೂ ಆಟವಾಡುವ ಸಲಕರಣೆಗಳ ಸೌಲಭ್ಯಗಳೂ ಅಲ್ಲಿವೆ. ■

